<u>ಸಿ.ಸಿ .ನಂ. 191/2022</u> ಪಿ<u>ಡಬ್ಲೂ಼ 1</u>

<u>ದಿನಾಂಕಃ 12-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ</u>**

3. ನಮ್ಮ ಪ್ರಕಾರ ಇದು ಸಂಘದ ಸಾಲ. ಒಂದು ಸಂಘ ಸಾಲದ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಸಂಘ ರಚನೆಯಾಗಿದೆ ಎಂದು ಒಂದು ಠರಾವನ್ನು ಕೊಡುತ್ತಾರೆ ಎಂದರೆ ಸಾಕ್ಷಿ ಸಾಲದ ಅರ್ಜಿಯನ್ನು ಮಾತ್ರ ಕೊಡುತ್ತಾರೆ ಎಂದು ನುಡಿದಿರುತ್ತಾರೆ. ಸಾಲದ ಅರ್ಜಿಯ ಜೊತೆಗೆ ಪೋಟೋ ಮತ್ತು ಆಧಾರ ಕಾರ್ಡ ಕೊಡುತ್ತಾರೆ. ಬೇರೆ ಯಾವುದೇ ದಾಖಲಾತಿಗಳನ್ನು ಕೊಡುವುದಿಲ್ಲ. ಸಾಲದ ಅರ್ಜಿ ಬಂದ ನಂತರ ಸಾಲದ ಕರಾರು ಪತ್ರ , ಡಿಮಾಂಡ ಪ್ರಾಮಿಸರಿ ನೋಟ್ ಪಡೆದುಕೊಳ್ಳುತ್ತೇವೆ . ಈ ಪ್ರಕರಣದಲ್ಲಿ ಸಾಲದ ಅರ್ಜಿ ಬಂದ ನಂತರ ಎಷ್ಟು ದಿನಗಳಿಗೆ ಸಾಲದ ಕರಾರು ಪತ್ರ ಹಾಗೂ ಡಿಮಾಂಡ ಪ್ರಾಮಿಸರಿ ನೋಟ್ ಪಡೆದುಕೊಂಡಿದ್ದೇವೆ ನೆನಪಿಲ್ಲ ಅಥವಾ ಅದೇ ದಿನ ಪಡೆದುಕೊಂಡಿದ್ದೇವೋ ನೆನಪಿಲ್ಲ . ಅವುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ. ಎಲ್ಲಾ ದಾಖಲಾತಿಗಳು ಸಾಲಗಾರರ ಹಾಗೂ ಜಾಮೀನುದಾರರ ಸಹಿಗಳನ್ನು ಪಡೆದುಕೊಳ್ಳುತ್ತೇವೆ . ಸಂಘದ ಸಾಲವಾಗಿರುವುದರಿಂದ ಪ್ರತಿನಿಧಿ 1 ಶಿಲ್ಪಾ , ಪ್ರತಿನಿಧಿ 2 ಲಕ್ಷ್ಮೀ , ಪ್ರತಿನಿಧಿ 3 ಉಮಾ , ಸದಸ್ಯರು ಪವಿತ್ರಾ ಹಾಗೂ ಸುಮಿತ್ರಾ ಐದು ಜನರು ಸಾಲಗಾರರು. ಅವರವರೇ ಜಾಮೀನುದಾರರಾಗಿತ್ತಾರೆ. ಸಾಲದ ದಾಖಲಾತಿ ಆಧಾರದ ಮೇಲೆ ಪ್ರತಿನಿಧಿ 1 , ಪ್ರತಿನಿಧಿ 2 , ಪ್ರತಿನಿಧಿ 3 ಎಂದು ಹೇಳುತ್ತಿದ್ದೇನೆ. ಸಾಲದ ಅರ್ಜಿ , ಸಾಲದ ಕರಾರು ಪತ್ರ ಆಧಾರದ ಮೇಲೆ ಪ್ರತಿನಿಧಿ 1 ರಿಂದ 3 ಎಂದು ಹೇಳುತ್ತಿದ್ದೇನೆ. ಅವರೇ ಪ್ರತಿನಿಧಿ 1 ರಿಂದ 3 ಹಾಗೂ ಜಾಮೀನುದಾರರು ಎಂದು ತೋರಿಸಲು ಸಂಘದಿಂದ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ. ಸಂಘದ ಸಾಲದ ಅರ್ಜಿ ಬಂದಾಗ ಸಂಘದ ಠರಾವನ್ನು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ . ಠರಾವಿನಲ್ಲಿ ಪ್ರತಿನಿಧಿ 1 ಯಾರು , ಪ್ರತಿನಿಧಿ 2 ಯಾರು , ಜಾಮೀನುದಾರರು ಯಾರು ಎಂದು ಕೂಡ ಠರಾವಿನಲ್ಲಿ ಇರಬೇಕಾಗುತ್ತದೆ ಎಂದರೆ ಸರಿಯಲ್ಲ . ಶ್ರೀದೇವಿ ಸಂಘ ಇತ್ತು ಅಥವಾ ಇದೆ ಎಂದು

ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಲದ ಅರ್ಜಿ , ಸಾಲಕ ಕರಾರು ಪತ್ರ ಹಾಗೂ ಡಿಮಾಂಡ ಪ್ರಾಮಿಸರಿ ನೋಟ್ ಹಾಜರು ಪಡಿಸಿದ್ದೇವೆ. ಸಂಘದ ಸದಸ್ಯರು ಇಂತಿಂತವರು ಇದ್ದರು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಆದರೆ ಸಾಲದ ಅರ್ಜಿ ಹಾಗೂ ಸಾಲದ ಕರಾರು ಪತ್ರಕ್ಕೆ ಸಹಿ ಹಾಕಿದ್ದಾರೆ . ಸಂಘದಲ್ಲಿ ಯಾರು ಯಾರು ಇದ್ದರು ಎಂಬ ಬಗ್ಗೆ ದಾಖಲಾತಿ ಹಾಜರು ಪಡಿಸಿದ್ದೇವೆ . ಸಾಲದ ಕರಾರು ಪತ್ರ ಹಾಗೂ ಡಿಮಾಂಡ ಪ್ರಾಮಿಸರಿ ನೋಟ್ ಸದರಿ ದಾಖಲಾತಿಗಳಾಗಿರುತ್ತವೆ . ಒಂದು ಸಂಘದ ಮಾಹಿತಿ ಎಂದರೆ ಅವರ ಹೆಸರುಗಳು ಹಾಗೂ ಅವರ ಪೋಟೋಗಳು ಹಾಗೂ ಪೋಟೋಗಳ ಮೇಲೆ ಅವರ ಸಹಿಗಳಿರುವ ದಾಖಲಾತಿ ಇರುತ್ತದೆ ಎಂದರೆ ಸರಿ . ಅಂತಹ ದಾಖಲಾತಿ ಹಾಜರು ಮಾಡಿದ್ದೇವೆ . ನಿಪಿ-14 ಅಂತಹ ದಾಖಲಾತಿ ಆಗಿರುತ್ತದೆ. ನಿಪಿ-14 ರಲ್ಲಿ ಆರೋಪಿಯ ಪೋಟೋ ಆಗಲೀ ಸಹಿ ಆಗಲೀ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಸಹಿ ಇದೆ . ಇದೇ ದಾಖಲಾತಿಯನ್ನು ನಿಪಿ-7 ಎಂದು ಹಾಜರು ಪಡಿಸಿದ್ದೇವೆ ಎಂದರೆ ಸಾಕ್ಷಿ ನಿಪಿ -7 ರ ಹಿಂದುಗಡೆ ಪುಟ ಜರೆಕ್ಸ ಆಗಿಲ್ಲ ಎಂದು ನುಡಿದಿರುತ್ತಾರೆ. ನಿಪಿ-14 ದಾಖಲಾತಿಯನ್ನು ಸಂಪೂರ್ಣವಾಗಿ ಒಂದೇ ಬಾರಿ ಬರೆದಿರುತ್ತೇನೆ. ನಿಪಿ-14 ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ನಂತರ ನಮ್ಮ ಅನುಕೂಲಕ್ಕೆ ತಕ್ಕಂತೆ ಬೇರೆ ಬರವಣಿಗೆ ಮಾಡಿಲ್ಲ ನಿಪಿ-14 ರಲ್ಲಿ ಶ್ರೀದೇವಿ ಸಂಘ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿ ಸಾಲದ ಅರ್ಜಿಯಲ್ಲಿ ಅವರೇ ಅದನ್ನು ನಮೂದು ಮಾಡಬೇಕಾಗುತ್ತದೆ , ಅದನ್ನು ಅವರು ಬರೆದಿಲ್ಲ ಎಂದು ನುಡಿದಿರುತ್ತಾರೆ . ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ದಿಃ 20-11-2021 ರಂದು ಗುರುತಿಸಲಾಗಿದೆ ಎಂದರೆ ಸರಿ . ಅದರ ನಂತರ ದಿಃ 14-12-2023 ರಂದು ಪುನಃ ದಾಖಲಾತಿಯನ್ನು ಗುರುತಿಸಲಾಗಿದೆ ಎಂದರೆ ಗೊತ್ತಿಲ್ಲ . ಒಮ್ಮೆ ಬರವಣಿಗೆ ಮಾಡಿದ ನಂತರ ಸಾಲಗಾರರ ಬಗ್ಗೆ ಮತ್ತೇ ಬರವಣಿಗೆ ಮಾಡಿಲ್ಲ ಎಂದರೆ ಸರಿ . ನಿಪಿ-14 ನ್ನು ಜರೆಕ್ಸ ಮಾಡಿ ಮತ್ತೇ ದಿಃ 13-06-2023 ರಂದು ಗುರುತಿಸಲಾಗಿದ್ದು ಅದು ನಿಪಿ -7 ಎಂದು ಗುರುತಿಸಲಾಗಿದೆ ಎಂದರೆ ಗೊತ್ತಿಲ್ಲ . ನಾನು ಕೂಡ ಈ ದಾಖಲಾತಿಯನ್ನು ಸಾಕ್ಷ್ಯದಲ್ಲಿ ಗುರುತಿಸಿದ್ದೇನೆ ಎಂದರೆ ಸರಿ . ನಿಪಿ-14 ರಲ್ಲಿ ಇಲ್ಲದೇ ಇರುವ ಶ್ರೀದೇವಿ

ಸಂಘ , ಸಾಃ ಗಂಗೆಕೊಳ್ಳ ಎಂದು ಇಲ್ಲದೇ ಇರುವುದು ನಿಪಿ -7 ರಲ್ಲಿ ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಹಿಂದಿನ ವ್ಯವಸ್ಥಾಪಕರು ಯಾವ ರೀತಿ ಮೆಂಟೆನ್ ಮಾಡಿದ್ದಾರೆ ನನಗೆ ಮಾಹಿತಿ ಇಲ್ಲ . ಹಿಂದಿನ ವ್ಯವಸ್ಥಾಪಕರು ಯಾರು ಯಾರು ಆಗಿದ್ದರು ಮಾಹಿತಿ ಇಲ್ಲ . ಮುಂದಿನ ದಿನಾಂಕದಲ್ಲಿ ಹಿಂದಿನ ವ್ಯವಸ್ಥಾಪಕರು ಯಾರು ಯಾರು ಎಂದು ತಿಳಿದುಕೊಂಡು ಹೇಳಲು ತೊಂದರೆ ಇಲ್ಲ . ನಿಪಿ-7 ರಲ್ಲಿ ಆರೋಪಿ ಸಾಲಗಾರರು ಹಾಗೂ ಅವರ ಪೋಟೋ ಸದರಿ ದಾಖಲಾತಿಯಲ್ಲಿ ಇಲ್ಲ ಎಂದರೆ ಮಾಹಿತಿ ಇಲ್ಲ. ಸಾಕ್ಷಿಗೆ ಆರೋಪಿ ಪರ ವಕೀಲರು ದಾಖಲಾತಿಯನ್ನು ನೋಡಿ ಹೇಳಿ ಎಂದಾಗ ಸಾಕ್ಷಿ ನಿಪಿ -7 ರ ಹಿಂದಿನ ಪುಟ ಜರೆಕ್ಸ ಆಗಿಲ್ಲ ಎಂದು ನುಡಿದಿರುತ್ತಾರೆ . ನಿಪಿ-7 ದಾಖಲಾತಿ ಇದು ಒಂದೇ ಪುಟ ಇರುವಂತದ್ದು ಎಂದರೆ ಸಾಕ್ಷಿ ಎರಡು ಪುಟ ಇದೆ ಎಂದು ನುಡಿದಿರುತ್ತಾರೆ . ನಿಪಿ-7 ಹಾಗೂ ಅದರ ಹಿಂದುಗಡೆ ಇರುವುದು ಎರಡನೇ ಪುಟ . ಸಾಕ್ಷಿ ಸ್ವತಃ ಆರೋಪಿಯ ಖಾತೆಗೆ ನೆಫ್ಟ ಮೂಲಕ ಹಣ ಸಂದಾಯ ಆಗಿರುವ ದಾಖಲಾತಿಯನ್ನು ನಾಳೆ ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ . ಸಂಘದ 5 ಜನರ ಖಾತೆಗೆ ನೆಫ್ಟ ಮೂಲಕ ಹಣ ಸಂದಾಯ ಆಗಿದೆ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೌಂಟರಾ ರಸೀದಿ ಹಾಜರು ಪಡಿಸುವುದು ಇದೆ. ಪಾಟೀ ಸವಾಲಿನಲ್ಲಿ ಕೇಳದೇ ಇದ್ದರೂ ಕೂಡ ಅಂತಹ ದಾಖಲಾತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಪ್ರಕರಣ ದಾಖಲಿಸಿದ್ದಕ್ಕೆ ಸುಳ್ಳು ದಾಖಲಾತಿ ಸೃಷ್ಟಿಸಿ ಹಾಜರು ಪಡಿಸುತ್ತಿದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈಗಾಗಲೇ ಹಾಜರು ಪಡಿಸಿದ ದಾಖಲಾತಿಗಳಲ್ಲಿ ನಿಪಿ -7 ರಲ್ಲಿ ಇಲ್ಲದೇ ಇರುವುದನ್ನು ನಿಪಿ -14 ರಲ್ಲಿ ತೋರಿಸಿ ಸೃಷ್ಟಿಸಿ ಹಾಜರು ಪಡಿಸಿದ್ದೇವೆ ಹಾಗೂ ಅದೇ ರೀತಿ ಮತ್ತೇ ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಈಗ ಹೇಳಿರುವ ದಾಖಲಾತಿಯನ್ನು ಹೊರತು ಪಡಿಸಿ ಮುಂದಿನ ವಾಯಿದೆಯಲ್ಲಿ ಬೇರೆ ಯಾವುದೇ ದಾಖಲಾತಿ ಹಾಜರು ಪಡಿಸುವುದಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

ಪಿಡಬ್ಲೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.